ಬರುವುದು ಯಾವಾಗ? ಈ ವಿಮಾನ ನಿಲ್ದಾಣ ಸ್ಥಾಪನೆಯಾಗುವುದು ಯಾವಾಗ? ಸರ್ಕಾರ ಸುಮ್ಮನೆ ಕಾಯುತ್ತಾ ಕುಳಿತುಕೊಂಡರೆ ಕೆಲಸವಾಗುವುದಿಲ್ಲ. ಸಂಬಂಧಪಟ್ಟ ಕೇಂದ್ರ ಮಂತ್ರಿಗಳ ಜೊತೆಗೆ ಹೋಗಿ ಕುಳಿತು ಮಾತನಾಡಿ ಈ ಕೆಲಸಗಳನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಸುಮ್ಮನೆ ಈ ರೀತಿ ರಿಪ್ಲೈ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಯಾವಾಗ ವಿಮಾನ ನಿಲ್ದಾಣವನ್ನು ಅಲ್ಲಿ ಆರಂಭಿಸುತ್ತೀರಿ ಎಂಬುದನ್ನು ಮಾನ್ಯ ಸಚಿವರು ಡೆಫನೆಟ್ಟಾಗಿ ಹೇಳಲಿ.

ಶ್ರೀ ಟಿ. ಜಾನ್ : ಮಾನ್ಯ ಅಧ್ಯಕ್ಷರೇ, ಹಾಸನದಲ್ಲಿ ಬೇಲೂರಂತಹ ಒಳ್ಳೆಯ ಪುಣ್ಯ ಸ್ಥಳಗಳು ಇವೆ. ಅಲ್ಲಿ ಏರ್‌ಪೋರ್ಟ್ ಬರಬೇಕೆಂದು ನಮಗೂ ಕೂಡ ಆಸೆ ಇದೆ. ಆದರೆ ನಾನು ಆಗಲೇ ಹೇಳಿದ ಹಾಗೆ ಅಲ್ಲಿ ಟೆಕ್ನಿಕಲ್ ಪ್ರಾಬ್ಲಂ ಇದೆ. 150ಕಿ.ಮೀ. ವ್ಯಾಪ್ತಿಯೊಳಗೆ ಇನ್ನೊಂದು ಏರಪೋರ್ಟ್ ಕೊಡಬಾರದೆಂದು ಏರ್‌ಪೋರ್ಟ್ ಅಥಾರಿಟಿಯ ಕಾನೂನಿನ ಪ್ರಕಾರ ಇದೆ ಎಂದು ಈಗ ತಿಳಿದು ಬಂದಿದೆ. ಆದ್ದರಿಂದ ದಯವಿಟ್ಟು ಕೇಂದ್ರ ಸರ್ಕಾರದಲ್ಲಿ ಇದರ ಬಗ್ಗೆ ನಾವು ಆಲೋಚನೆ ಮಾಡಬೇಕಾಗುತ್ತದೆ. ಅಷ್ಟರಮಟ್ಟಿಗೆ ಅಲ್ಲಿ ವಿಮಾನ ನಿಲ್ದಾಣ ಮಾಡಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, 150ಕಿ.ಮೀ. ವ್ಯಾಪ್ತಿಯೊಳಗೆ ಇನ್ನೊಂದು ಏರ್‌ಪೋರ್ಟ್ ಸಾಧ್ಯವಿಲ್ಲವೆಂದು ಈಗ ಇವರಿಗೆ ಮನವರಿಕೆಯಾಗಿದೆ. ಮೊದಲಿನವರು ಏನು ಮಾಡುತ್ತಿದ್ದರು? 5.50 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಸ್ಯಾಂಕ್ಷನ್ ಮಾಡಿದ್ದೇಕೆ? ಅದರಲ್ಲಿ 3.16 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇಕೆ? ಯಾರ ಮನೆಯ ದುಡ್ಡು ಇದು? ಆ ವಿಮಾನ ನಿಲ್ದಾಣದ ಕೆಲಸ ಮಾಡಿಸುತ್ತೇವೆ ಎಂದು ಮಾನ್ಯ ಸಚಿವರು ಭರವಸೆ ಕೊಡಲಿ. ಅದನ್ನು ಬಿಟ್ಟು ಅಲ್ಲಿ ಟೆಕ್ನಿಕಲ್ ಪ್ರಾಬ್ಲಂ ಇದೆ ಎಂದರೆ ಹೇಗೆ? ಅಲ್ಲಿ ಜಮೀನು ಅಕ್ವೈರ್ ಮಾಡಿಕೊಂಡು ಬೇಲಿ ಹಾಕಿ ಬಿಲ್ಡಿಂಗ್ ಎಲ್ಲಾ ಕಟ್ಟಿ, ಈಗ ಅಲ್ಲಿ ಟೆಕ್ನಿಕಲ್ ಪ್ರಾಬ್ಲಂ ಇದೆ ಎಂದು ಹೇಳಿದರೆ ಹೇಗೆ? ಟೆಕ್ನಿಕಲ್ ಪ್ಲಾಬ್ಲಂ ಬಗ್ಗೆ ಹಿಂದಿದ್ದವರಿಗೆ ಜ್ಞಾನ ಇರಲಿಲ್ಲವೇ? ಅಲ್ಲಿ ಸಾಕಷ್ಟು ದುಡ್ಡು ಖರ್ಚು ಮಾಡಲಾಗಿದೆ. ಸುಮ್ಮನೆ ನೆಪಗಳನ್ನು ಹೇಳದೇ ಅಲ್ಲಿ ವಿಮಾನ ನಿಲ್ದಾಣ ಆರಂಭಿಸುವುದು ಯಾವಾಗ ಎಂಬುದನ್ನು ಮಾನ್ಯ ಸಚಿವರು ಹೇಳಲಿ.

ಅಧ್ಯಕ್ಷರು : ಎಲ್ಲರೂ ಸೇರಿ ಅಲ್ಲಿ ವಿಮಾನ ನಿಲ್ದಾಣವನ್ನು ಸ್ಥಾಪಿಸಲು ಪ್ರಯತ್ನ ಪಡಿ.

ಶ್ರೀ ಟಿ. ಜಾನ್ : ಆಯಿತು.

ಅಧ್ಯಕ್ಷರು : ಮಾನ್ಯ ಗುರುಸ್ವಾಮಿಯವರೇ, ತಮ್ಮ ಪ್ರಶ್ನೆಗೆ ಉತ್ತರಿಸಲು ಮಾನ್ಯ ಸಚಿವರು ಟೈಮ್ ಕೇಳಿದ್ದಾರೆ. ಅದೂ ಅಲ್ಲದೇ ಮಾನ್ಯ ಆಹಾರ ಸಚಿವರು ದೆಹಲಿಗೆ ಹೋಗಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಣ ವಸೂಲಿ

594 - ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಬೆನಗಾನಹಳ್ಳಿ ಸದಾನಂದನಗರದ ಸರ್ವೆ ನಂ. 36/1ರಲ್ಲಿ 8-10

ವರ್ಷಗಳ ಹಿಂದೆ ಬಡಾವಣೆ ನಿರ್ಮಿಸಿ ಅಧಿಕೃತವಾಗಿ ನಿವೇಶನ ಪಡೆದು ಅದರಲ್ಲಿ ಮನೆಗಳನ್ನು ನಿರ್ಮಿಸಿ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸದರಿ ನಿವೇಶನಗಳನ್ನು ಸಕ್ರಮ ಮಾಡುವುದಾಗಿ ತಿಳಿಸಿ ನಿವೇಶನದಾರರಿಂದ ಅಕ್ರಮವಾಗಿ ಹಣ ವಸೂಲಿ ಮಾಡಿ ನೋಟೀಸನ್ನು ನೀಡಿ ಹಣ ಕೊಡದಿದ್ದವರಿಗೆ ಕಿರುಕುಳ ನೀಡುತ್ತಿರುವುದು ಸರ್ಕಾರ ಮನಗಂಡಿದೆಯೇ?

ಇ) ಹಾಗಿದ್ದಲ್ಲಿ ಅಧಿಕಾರಿಗಳು ನೀಡುತ್ತಿರುವ ಕಿರುಕುಳವನ್ನು ತಪ್ಪಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬಂದಿರುತ್ತದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

11.30 ಎ.ಎಂ.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ನನಗೆ ಇವರು ಏನು ಉತ್ತರ ಕೊಟ್ಟಿದ್ದಾರೆ, ಈ ಉತ್ತರ ಸಮರ್ಪಕವಾಗಿ ಬಂದಿಲ್ಲವೆಂದು ಹೇಳಬೇಕಾಗುತ್ತದೆ. ನನ್ನಲ್ಲಿ ಪುರಾವೆಗಳಿವೆ, ಇದು ಲೀಗಲೈಸ್ ಆಗಿರುವುದು ಕಾಣುತ್ತಿದೆ. ಇದನ್ನು ತಮಗೆ ಸಬ್ಮಿಟ್ ಮಾಡುತ್ತೇನೆ, ತಾವು ಮಂತ್ರಿಗಳಿಗೆ ಕಳುಹಿಸಬಹುದು. ನನಗೆ ಗೊತ್ತಿರುವ ಹಾಗೆ, ನನ್ನ ಹತ್ತಿರ ಇರುವ ಪುರಾವೆ ಪ್ರಕಾರ ವಿಲೇಜ್ ಪಂಚಾಯತ್ ಬೆನಗಾನಹಳ್ಳಿಯವರು, ಮತ್ತು ತಹಶೀಲ್ದಾರ್‌ರವರು 1997ರಲ್ಲಿ ಲೈಸೆನ್ಸ್ ಕೊಟ್ಟಿದ್ದಾರೆ. ಲೀಗಲೈಸ್ ಮಾಡಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯಾ? ಇದೇ ಮುನಿಸಿಪಾಲಿಟಿಯವರು ಬೆಟರ್‌ಮೆಂಟ್ ಲೆವಿಯನ್ನು ಈ ಲೇಔಟ್‌ನಿಂದ ಕಲೆಕ್ಟ್ ಮಾಡಿದ್ದಾರೆ. ಒಂದೊಂದು ಮನೆಗೆ 24,850 ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯಾ? ಬೆಂಗಳೂರು ಸಿಟಿ ಕಾರ್ಪೊರೇಷನ್ ಎಲೆಕ್ಷನ್‌ನಲ್ಲಿ ನಾಲ್ಕನೇ ವಾರ್ಡ್‌ಗೆ ಸೇರುತ್ತದೆ ಎಂದು ಹೇಳುತ್ತಾರೆ ಅದು ಈಗಾಗಲೇ ಮುನಿಸಿಪಲ್ ಕಾರ್ಪೊರೇಷನ್ ಆಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯಾ? 1995ನೇ ಇಸವಿಯಲ್ಲಿ ಕರ್ನಾಟಕ ಹೈಕೋರ್ಟಿನವರು ಒಂದು ರೂಲಿಂಗ್ ಕೊಟ್ಟು ಇದನ್ನು ಒಡೆಯಬೇಡಿ, ಲೀಗಲೈಸ್ ಮಾಡಿ ಎಂದು ಆರ್ಡರ್ ಪಾಸ್ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯಾ? ಬೆಂಗಳೂರು ಸಿಟಿ ಕಾರ್ಪೊರೇಷನ್‌ನವರು ಖಾತೆ ಛೇಂಜ್ ಮಾಡಿ ಬೆಟರ್‌ಮೆಂಟ್ ಲೆವಿಯನ್ನು ಕಲೆಕ್ಟ್ ಮಾಡಿದ್ದಾರೆ. ಅಲ್ಲದೆ ಬೆನಗಾನಹಳ್ಳಿಯ ಜನತೆಗೆ ಈ ಕಿರುಕುಳ ಇನ್ನೂ ತಪ್ಪಿಲ್ಲ. Everything is legalised. ಆದರೂ ಸರ್ಕಾರ ಇಲ್ಲವೆಂದು ಹೇಳುತ್ತಿದೆ. ಈಗಲಾದರೂ ದಯಮಾಡಿ ಈ ಎಲ್ಲ ಅಂಶಗಳನ್ನು ಪರಿಶೀಲನೆ ಮಾಡಿ, ನನ್ನ ಹತ್ತಿರ ಪುರಾವೆಗಳಿವೆ, ಅದನ್ನು ಪರಿಶೀಲಿಸಿ ರೆಗ್ಯುಲರೈಸ್ ಮಾಡುವುದಕ್ಕೆ ತಾವು ಆಶ್ವಾಸನೆ ಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ಅವರ ಹತ್ತಿರ ಇರತಕ್ಕಂತಹ ಪುರಾವೆಗಳು, ಮುನಿಸಿಪಾಲಿಟಿಗೆ ಸಂಬಂಧಪಟ್ಟ ಕೆಲವು ದಾಖಲೆಗಳಿವೆ ಎಂದು ಹೇಳಿದ್ದಾರೆ. ನಮಗೆ ಈ ಪ್ರಶ್ನೆಯನ್ನು ಅವರು ಕೇಳುತ್ತಿರುವುದು ಬಿಡಿಎಗೆ ಸಂಬಂಧಪಟ್ಟಂತೆ. ಬಿಡಿಎದವರು ಸಂಬಂಧಪಟ್ಟ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೋಸ್ಕರ ಏನು ಪ್ರಯತ್ನ ನಡೆಸಿದರು ಅದರ ಬಗ್ಗೆ ಹೇಳಬೇಕಾದರೆ, ತಮ್ಮಲ್ಲಿ ಇರತಕ್ಕಂತಹ ದಾಖಲಾತಿಗಳು ನಮ್ಮಲ್ಲಿ ಇಲ್ಲ. ಬಹುಶಃ ಮುನಿಸಿಪಾಲಿಟಿಗೆ ಸಂಬಂಧಪಟ್ಟ ದಾಖಲಾತಿ, ಜಮೀನು 1991ರಲ್ಲಿ ಅವರಿಗೆ ಗ್ರ್ಯಾಂಟ್ ಆಗಿ ಪುನಃ ಬೇರೆಯವರ ಹೆಸರಿನಲ್ಲಿ ಟ್ರಾನ್ಸ್‌ಫರ್ ಆಗಿದ್ದರೆ ಆ ದಾಖಲಾತಿ, ಪರ್ಮಿಷನ್ ಸಿಕ್ಕಂತಹ ದಾಖಲಾತಿ ಇವೆಲ್ಲವನ್ನೂ ತಾವು ಕಳುಹಿಸಿಕೊಟ್ಟರೆ ನಾವು ಪರಿಶೀಲಿಸುತ್ತೇವೆ. ಏಕೆಂದರೆ, ರೆಗ್ಯುಲರೈಸ್ ಮಾಡುವ ಯಾವ ಪ್ರಸ್ತಾವನೆಯೂ ಕೂಡ ಸರ್ಕಾರದ ಮುಂದೆ ಇಲ್ಲ. ಮೊನ್ನೆ ದಿವಸ ಇದರ ಬಗ್ಗೆ ಒಂದು ಮಾತುಕತೆ ನಡೆದಾಗ ಮಾನ್ಯ ಸುರೇಶ್‌ರವರು ಮಾನ್ಯ ಮುಖ್ಯಮಂತ್ರಿಗಳಿಗೆ ಕೆಲವು ಆಲ್ಟರ್ನೇಟ್ ಸಜೆಷನ್ಸ್ ಕೊಟ್ಟಿದ್ದಾರೆ. ಅದನ್ನು ನಮ್ಮ ಕ್ಯಾಬಿನೆಟ್‌ನಲ್ಲಿ ಕೂಡ ಚರ್ಚೆ ಮಾಡಿ ಈಗಾಗಲೇ ಅದರ ಬಗ್ಗೆ ಎಕ್ಸಾಮಿನ್ ಮಾಡುತ್ತಿದ್ದೇವೆ. ಬಿಡಿಎ ಲ್ಯಾಂಡ್‌ನಲ್ಲಿ ಎಲ್ಲಿ ರೆಸಿಡೆನ್‌ಶಿಯಲ್ ಮನೆಗಳು ಇವೆ, ಅಂತಹ ಮನೆಗಳನ್ನು ರೆಗ್ಯುಲರೈಸ್ ಮಾಡುವುದಕ್ಕೆ ಯಾವ ಕ್ರಮ ಜರುಗಿಸಬೇಕು, ಹಣ ಕಟ್ಟಿಸಿಕೊಂಡು ರೆಗ್ಯುಲರೈಸ್ ಮಾಡಿಸುವುದು ಅಥವಾ ಬಿಡಿಎದವರಿಗೆ ವಹಿಸಿಕೊಡುವುದು, ಪುನಃ ರೀ-ಸೇಲ್ ಮಾಡುವುದು ಇಂತಹ ಕೆಲವು ಪ್ರಪೋಸಲ್‌ಗಳನ್ನು ಅವರು ಇಟ್ಟಿದ್ದಾರೆ. ಈ ಸಲಹೆಗಳನ್ನು ಕ್ಯಾಬಿನೆಟ್ ಮುಂದೆ ವಿವರವಾಗಿ ಇಟ್ಟು ಚರ್ಚೆ ಮಾಡಿ ಅದಕ್ಕೆ ಏನಾದರೂ ಪರಿಹಾರ ಕಂಡು ಹಿಡಿಯಬೇಕೆಂದು ಅದು ಪರಿಶೀಲನೆಯಲ್ಲಿದೆ. ಅದಕ್ಕೆ ತಾವೂ ಕೂಡ ಆ ಡಾಕ್ಯುಮೆಂಟ್ಸ್ ಕಳುಹಿಸಿದರೆ ನಾನು ಬಿಡಿಎ ನಿಂದ ಎಕ್ಸಾಮಿನ್ ಮಾಡಿಸಿ ಸೂಕ್ತವಾದ ಪರಿಹಾರ ಕಂಡುಹಿಡಿಯುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಒಂದು ರೆಲವೆಂಟ್ ಪಾಯಿಂಟ್ ಇದೆ, ಬಿಡಿಎನವರು ಎನ್‌ಒಸಿಯನ್ನು 7.11.1992ರಲ್ಲಿ ಇಶ್ಯೂ ಮಾಡಿದ್ದಾರೆ. We have no objection to this layout. With all that why are they questioning the layout people? Again it is a pertinent question. 29.10.1995ರಲ್ಲಿ ಕರ್ನಾಟಕ ಹೈಕೋರ್ಟಿನಲ್ಲಿ ರೂಲಿಂಗ್ ಕೊಟ್ಟಿದ್ದಾರೆ. They have given a ruling that this lay-out should be regularised, legalised. ಅದರ ಪ್ರಕಾರ ಈ ಲೇಔಟನ್ನು ಕ್ರಮಬದ್ಧವಾಗಿ ಈ ಲೇಔಟ್‌ನಲ್ಲಿ ಇರತಕ್ಕಂಥವರು ಈಗಾಗಲೇ ಮನೆ ಕಟ್ಟಿ ವಾಸ ಮಾಡಿ, ಬೆಟರ್‌ಮೆಂಟ್ ಲೆವಿ ಕಟ್ಟಿದ್ದಾರೆ, ಆದ್ದರಿಂದ ಇನ್ನು ಯಾವ ವಿಧವಾದ ಕಿರುಕುಳವನ್ನು ಕೊಡದೆ, ಹೈಕೋರ್ಟಿನಲ್ಲಿ ಏನು ವರ್ಡಿಕ್ಟ್ ಕೊಟ್ಟಿದ್ದಾರೆ, ಅದನ್ನು ಹಾನರ್ ಮಾಡಿ ಅದನ್ನು ಜಾರಿಗೆ ತರಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಂತಹ ಕೇಸಸ್ ಯಾವರೀತಿ ರೆಗ್ಯುಲರೈಸ್ ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಇದಕ್ಕೆ ಏನಾದರೂ ಪರಿಹಾರ ಕಂಡು

ಹಿಡಿಯಬೇಕೆಂದು ಚರ್ಚೆ ನಡೆದಿದೆ. ತಮ್ಮ ಕೇಸ್‌ನಲ್ಲಿ ತಾವು ಹೈಕೋರ್ಟ್ ರೂಲಿಂಗ್ ತೋರಿಸಿ, ಲ್ಯಾಂಡ್ ರೆವಿನ್ಯೂ ಆಕ್ಟ್‌ನ ಪ್ರಕಾರ 1991ರಲ್ಲಿ ಗ್ರ್ಯಾಂಟ್ ಆದ ಲ್ಯಾಂಡ್ ಯಾರ ಹೆಸರಿನಲ್ಲಿ ಇದೆ, ಅವರು ಬೇರೆಯವರಿಗೆ ಯಾವ ರೀತಿ ಪರಭಾರೆ ಮಾಡಿದರು, ಇವೆಲ್ಲ ಡಾಕ್ಯುಮೆಂಟ್ಸ್ ಬಿಡಿಎದವರು ಕಾನೂನಿನ ಪ್ರಕಾರ ಎಕ್ಸಾಮಿನ್ ಮಾಡಬೇಕಾಗುತ್ತದೆ. The very title is questioned. ಓನರ್‌ಶಿಪ್‌ಗೆ ಛಾಲೆಂಜ್ ಮಾಡುವ ಪರಿಸ್ಥಿತಿ ಇಲ್ಲಿ ಇದೆ. ಅದಕ್ಕಾಗಿ ತಾವು ಸಂಬಂಧಪಟ್ಟ ಡಾಕ್ಯುಮೆಂಟ್ಸ್ ನನಗೆ ಕಳುಹಿಸಿ, ನಾನು ಪರಿಶೀಲನೆ ಮಾಡಿ ಅದಕ್ಕೆ ಸೂಕ್ತವಾದ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

SRI A.S. GURUSWAMY : I will pass on the documents, Sir.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮಲ್ಲಿ ಇದೇ ಮಾಹಿತಿ ಇದೆ, ಆದರೆ ನಿಜವಾದ ಓನರ್ ಯಾರು ಎಂದು ಗೊತ್ತಾಗಬೇಕು. ಅದು ಫ್ರಾಡ್ ಮಾಡಿ ಟ್ರಾನ್ಸ್‌ಫರ್ ಮಾಡಿಕೊಂಡಿದ್ದಾರೆ. ಒಬ್ಬರು ಅಸಿಸ್ಟೆಂಟ್ ಕಮೀಷನರ್ ಮತ್ತು ಅಲಾಟಿ ಇಬ್ಬರೂ ಸೇರಿಕೊಂಡು ಲ್ಯಾಂಡ್ ಗ್ರ್ಯಾಂಟ್ ಮಾಡಿಕೊಂಡಿದ್ದಾರೆ. ಅದು ಯಾವ ರೀತಿ ಎನ್ನತಕ್ಕಂಥಾದ್ದು ಗೊತ್ತಾಗುತ್ತದೆ. ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಬಿಡಿಎನವರಿಗೆ ಕಳುಹಿಸಿದರೆ ನಾವು ಎಕ್ಸಾಮಿನ್ ಮಾಡುತ್ತೇವೆ.

ಶ್ರೀ ಎ.ಎಸ್. ಗುರುಸ್ವಾಮಿ : ನಮ್ಮ ಹತ್ತಿರ ರೆಲವೆಂಟ್ ಡಾಕ್ಯುಮೆಂಟ್ಸ್ ಇದೆ. We will pass it on to you, sir.

ಔರಾದ್ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ

595 - ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ 26 ಕೆರೆಗಳು 2 ಏತ ನೀರಾವರಿ ಯೋಜನೆಗಳು ಇದ್ದು 23000 ಎಕರೆ ನೀರಾವರಿ ಆಗಬೇಕಾಗಿದ್ದು ಕೇವಲ 1500 ಎಕರೆ ಜಮೀನು ಮಾತ್ರ ನೀರು ಕುಡಿಯುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆಲ್ಲ ಕಾರಣವೇನು? ಸರ್ಕಾರ ತೆಗೆದುಕೊಂಡ ಕ್ರಮವೇನು?

ಆ) ಸಂಪೂರ್ಣವಾಗಿ ನೀರಾವರಿ ಲಾಭ ಪಡೆಯಬೇಕಾದರೆ ಕೈಗೊಳ್ಳಬೇಕಾದ ದುರಸ್ತಿ ಕಾಮಗಾರಿಗಳೇನು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬಂದಿದೆ. ಒಟ್ಟು 27 ಸಣ್ಣ ನೀರಾವರಿ ಕೆರೆಗಳು ಮತ್ತು 3 ಏತ ನೀರಾವರಿ ಯೋಜನೆಗಳು ಅಸ್ತಿತ್ವದಲ್ಲಿದೆ. ಇವುಗಳ ನೀರಾವರಿ ಕ್ಷೇತ್ರ ಕೆಳಗಿನಂತಿದೆ.